ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪಂರಗೆಲಸ ಮಾಡುವವರಂ, ಗೊಂಬೆಗಳನ್ನು ತಯಾರು ಮಾಡುವವರ ಒಂದಂ ಸೆಕ್ಷನ್ ಇದೆ. ಅವರೂ ಕೂಡ ಚೆನ್ನಾಗಿ ಯಾರಂ ಈ ಕೆಲಸವನ್ನು ಮಾಡುತ್ತಾರೆ ಎಂಬುದನ್ನು ನೋಡಿದ್ದಾರೆ. ನಾವು ಅವರ ಅಭಿಪ್ರಾಯವನ್ನೂ ತೆಗೆದುಕೊಂಡು ಮಾಡಿದ್ದೇವೆ. ಯಾರೇ ಆಗಲಿ ಒಬ್ಬರನ್ನು ನಿಪುಣರಂ ಎಂದಂ ಹೇಳಬೇಕಾದರೆ, ಅವರಿಗೆ ಆ ವಿಷಯದಲ್ಲಿ ಚೆನ್ನಾಗಿ ಮಾಹಿತಿ ಗೊತ್ತಿದ್ದರೆ ಮಾತ್ರ ಹೇಳುವುದಕ್ಕೆ ಸಾಧ್ಯ.

ಶ್ರೀ ಬಿ. ಸತ್ಯನಾರಾಯಣಸಿಂಗ್ —ಸ್ವಾಮಿ, ಇಲ್ಲಿ ಕಮಿಟಿಯಂ ಸದಸ್ಯರಂ ಯಾರೂ ಇಲ್ಲ. ಇದ್ದಿದ್ದರೆ ಹೇಳುತ್ತಿದೆ. ೪೫ ಸಾವಿರ ರೂಪಾಯಿ ಟೆಂಡರ್ ಇದ್ದಿದನ್ನು ೭೦ ಸಾವಿರ ರೂಪಾಯಿಗೆ ವಿತರ್ಕ್ಯಾಗಿ ಇಳಿಸಿದ್ದಾರೆ ? ನನ್ನ ಮಟ್ಟಿಗೆ ಹೇಳುವುದಾದರೆ ಇದರಲ್ಲಿ ಏನೋ ದುರ್ವ್ಯವಹಾರ ನಡೆದಿದೆ. ಈಗ ೪೫ ಸಾವಿರ ರೂಪಾಯಿಗಳಿಗೆ ಟೆಂಡರ್ ಕೊಟ್ಟಿರುವವರೂ ಕೂಡ ಪ್ರತಿವೆಗಳನ್ನು ಮಾಡುವವರಂ ಅವರಂ ಸ್ಥಳೀಯಂ ಜನ, ಅವರಂ ದೂರ ಯಾವ ಊರಿಗೂ ಹೋಗಬೇಕಾದ್ದಿಲ್ಲ. ಆದಂದರಿಂದ ಅವರು ೪೫ ಸಾವಿರ ರೂಪಾಯಿಗಳಿಗೆ ಟೆಂಡರ್ ಹಾಕಿದ್ದಾರೆ. ಆದರೆ ಅವರಂ ಚೆನ್ನಾಗಿ ಕೆಲಸಮಾಡುವುದಿಲ್ಲ ಎಂದಂ ಹೇಳುವುದಂ ಸತ್ಯಕ್ಕೆ ದೂರವಾದುದು. ಪ್ರತಿಯೊಂದನ್ನೂ ಎಂಡೋಮೆಂಟ್ ಕಮಿಷನರ್‌ರವರೇ ಪರಿಶೀಲನೆ ಮಾಡುವುದು ಅಷ್ಟು ಸರಿಯಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ವಿಶೇಷ ಜಿಲ್ಲಾಧಿಕಾರಿಗಳೇ ಇದನ್ನು ಸ್ವತ ಜವಾಬ್ದಾರಿಯಿಂದ ಮಾಡಿಲ್ಲ. ಇದರಲ್ಲಿ ಸಮಿತಿಯ ಸದಸ್ಯರೂ ಕೂಡ ಇದ್ದಾರೆ ೪೫ ಸಾವಿರ ರೂಪಾಯಿಗೆ ಟೆಂಡರ್ ಕೊಟ್ಟಿದ್ದಾಗ ನಾನು ದೇವಸ್ಥಾನದ ಫಂಡ್‌ನಲ್ಲಿ ಅಷ್ಟು ದುಡ್ಡಿಲ್ಲ, ಇದನ್ನು ಕಡಿಮೆ ಮಾಡಿಕೊಳ್ಳಬೇಕೆಂದು ಹೇಳಿದಾಗ ಎಂಡೋಮೆಂಟ್ ಕಮಿಷನರ್‌ರವರಂ ಟೆಂಡರುದಾರರನ್ನು ಕರೆತಂ ಹೌದು ಇದನ್ನು ಕಡಿಮೆ ಮಾಡಿಕೊಳ್ಳಬೇಕಂ, ಆದರಲ್ಲಿ ಅಷ್ಟು ದುಡ್ಡಿಲ್ಲ, ನೀವು ಹಣವನ್ನು ಕಡಿಮೆ ಮಾಡಿಕೊಂಡರೆ ಅವರಿಗೆ ನೀವು ಸಹಾಯಂ ಮಾಡಿದಂತಾಗುತ್ತದೆಂದು ಹೇಳಿದಮೇಲೆ ಅವರಂ ನಮಗೆ ಶಿಯಾಯಿತಿ ತೋರಿಸಿದ್ದಾರೆ. ಇದರಲ್ಲಿ ನಮಗೆ ಏನಾದರೂ ಅನುಮಾನ ಇದ್ದರೆ ಎಂಡೋಮೆಂಡ್ ಕಮಿಷನರ್‌ರವರನ್ನು ಅಲ್ಲಿಗೆ ಕಳಂಹಿಸಿ ಇದರ ಬಗ್ಗೆ ಪೂರ್ಣ ವಿವರಗಳನ್ನು ತರಿಸಿಕೊಂಡು ಸಭೆಗೆ ತಿಳಿಸಂತ್ತೇನೆ.

ಶ್ರೀ ಬಿ. ಸತ್ಯನಾರಾಯಣಸಿಂಗ್ —ಈ ೪೫ ಸಾವಿರ ರೂಪಾಯಿಗಳಿಗೆ ಟೆಂಡರ್ ಕೊಟ್ಟಿರುವವರಂ ಸ್ಥಳೀಯಂ ಜನರಂ, ಆದುದರಿಂದ ಅವರಂ ಒಪ್ಪಿಕೊಂಡಿದ್ದಾರೆ ಎಂಬುದು ನಮಗೆ ಗೊತ್ತಿದೆ:

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಮಗೆ ವರದಿ ಮಾಡಿರುವವರಂ ಬೇಜವಾಬ್ದಾರಿಯಿಂದ ಮಾಡಿಲ್ಲ ವೆಂದಂ ನನ್ನ ಮನಸ್ಸಿಗೆ ಅನಿಸಂತ್ತದೆ.

ಶ್ರೀ ಕಾಗೋಡು ತಿಮಂ ಪ್ಪ.—ಈ ಬಗ್ಗೆ ಕಮಿಟಿಯಂ ಅಭಿಪ್ರಾಯವನ್ನು ಪಡೆದಿದೆ ಎಂದು ತಾವು ಹೇಳುತ್ತೀರಿ, ಅವರು ಪಡೆದಿಲ್ಲ ಎಂದಂ ಹೇಳುತ್ತಾರೆ. ಇದರಲ್ಲಿ ಯಾವುದಂ ಸರಿ ? ಇಲ್ಲಿ ಗಾಡಿ ಕೆಲಸ ಮಾಡುವವನೂ ಕೂಡ ತನ್ನ ಕೂಲಕಸಬನ್ನು ಮಾಡುತ್ತಿದ್ದಾನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ —ನಿವಂಗೆ ಅನುಮಾನ ಬರದೇ ಇರುವ ಕಡೆಯಲ್ಲೂ ಅನುಮಾನ ಬಂದರೆ ಅದಕ್ಕೆ ನಾವೇನಂ ಮಾಡುವುದಕ್ಕಾಗುತ್ತದೆ ? ತಮಗೆ ಏನಾದರೂ ಅನುಮಾನ ಇದ್ದರೆ ತಿಳಿಸಿ ನಂತರ ಎಂಡೋಮೆಂಟ್ ಕಮಿಷನರ್‌ರವರನ್ನು ಕರೆಸಿ ಪೂರ್ಣ ವಿವರಗಳನ್ನು ತಿಳಿದಂ ಸಭೆಗೆ ತಿಳಿಸಂತ್ತೇನೆ.

Amount given under DIR Scheme in Tiptur.

480. SRI T. M. MANJUNATH (Tiptur).—Will the Chief Minister be pleased to state :

(*a*) the amount given under DIR Scheme through Nationalised Banks to (Tiptur) and D.C.C. Banks of Tiptur ;

(*b*) The No. of applications received for providing funds under DIR Schemes ?

SRI D. DEVARAJ URS (Chief Minister) —

(*a*) The Nationalised Banks have given a total of Rs. 7,55,012 under the DIR scheme in Tiptur Taluk as on 31st March 1977. The D.C.C. Banks have not given any credit under the DIR Scheme as the DIR scheme does not apply to DCC Banks.

(*b*) The total number of applications received under the DIR Scheme are 2028 as on 31st March 1977

ಶ್ರೀ ಟಿ. ಎಂ. ಮಂಜುನಾಥ್.—ಸ್ವಾಮಿ, ನಮ್ಮ ತಾಲ್ಲೂಕಿನಲ್ಲಿ ಸುಮಾರು ೭ ಲಕ್ಷ ಚಿಲ್ಲರೆ ಹಣವನ್ನು ಡಿ.ಐ.ಆರ್. ನಲ್ಲಿ ಕೊಟ್ಟಿದ್ದೇವೆಂದು ಹೇಳಿದ್ದೀರಿ, ಇದರಲ್ಲಿ ಯಾವ ಯಾವ ಬ್ಯಾಂಕ್‌ಗಳಲ್ಲಿ, ಎಷ್ಟೆಷ್ಟು ಅರ್ಜಿಗಳಿಗೆ ಹಣವನ್ನು ಕೊಟ್ಟಿದ್ದೀರಿ ಎಂಬುದನ್ನು ಹೇಳುತ್ತೀರಾ ಸ್ವಾಮಿ ?

† ಶ್ರೀ ಡಿ. ದೇವರಾಜ ಅರಸ್.—ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್‌ಗೆ ಬಂದಿದ್ದ ಅರ್ಜಿಗಳು ೯೯೦ ಅದರಲ್ಲಿ ೫೩೪ ಅರ್ಜಿಗಳಿಗೆ ೨,೦೬೭೦ ರೂಪಾಯಿಗಳನ್ನು ಕೊಟ್ಟಿದ್ದೇವೆ. ಕೆನರಾ ಬ್ಯಾಂಕ್‌ಗೆ ೭೧೧ ಅರ್ಜಿಗಳು ಬಂದಿದ್ದವು ಅದರಲ್ಲಿ ಬಂದಿದ್ದ ಎಲ್ಲ ಅರ್ಜಿಗಳಿಗೂ ಹಣ ಕೊಟ್ಟಿದ್ದೇವೆ, ಆ ಹಣ ೩,೯೮,೫೦೭ ರೂಪಾಯಿಗಳು. ಸಿಂಡಿಕೇಟ್ ಬ್ಯಾಂಕ್‌ಗೆ ೩೨೭ ಅರ್ಜಿಗಳು ಬಂದಿದ್ದವು, ಅದರಲ್ಲೂ ಕೂಡ ಎಲ್ಲ ಅರ್ಜಿಗಳಿಗೂ ಹಣವನ್ನು ಕೊಟ್ಟಿದ್ದೇವೆ. ಅದಕ್ಕೆ ಕೊಟ್ಟ ಹಣ ೧,೬೧,೮೩೫ ರೂಪಾಯಿಗಳು. ಒಟ್ಟು ಬಂದಿದ್ದ ಅರ್ಜಿಗಳು ೨೨೨೮ ಅದರಲ್ಲಿ ೧೫೭೭ ಅರ್ಜಿಗಳಿಗೆ ಹಣವನ್ನು ಕೊಟ್ಟಿದ್ದೇವೆ. ಇಷ್ಟು ಅರ್ಜಿಗಳಿಗೆ ಕೊಟ್ಟು ಒಟ್ಟು ಹಣ ೭,೫೫,೦೧೭ ರೂಪಾಯಿಗಳು.

ಶ್ರೀ ಟಿ. ಎಂ, ಮಂಜುನಾಥ —ಸ್ವಾಮಿ, ತಮ್ಮ ಹೇಳಿಕೆ ಪ್ರಕಾರ ಇನ್ನೂ ಬಹಳ ಅರ್ಜಿಗಳು ಹಾಗೆಯೇ ಪೆಂಡಿಂಗ್ ಇವೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಮತ್ತು ಸಿಂಡಿಕೇಟ್ ಬ್ಯಾಂಕ್‌ಗಳಲ್ಲಿ ಕಡಿಮೆ ಅರ್ಜಿಗಳಿಗೆ ಹಣವನ್ನು ಕೊಟ್ಟಿದ್ದಾರೆ. ಅಲ್ಲಿನ ಮ್ಯಾನೇಜರ್‌ಗಳು ಬಂದ ಅರ್ಜಿಗಳನ್ನು ಸರಿಯಾಗಿ ನೋಡದೆ, ಅರ್ಜಿ ಹಾಕಿದ್ದವರನ್ನು ಇವತ್ತು ಬನ್ನಿ ನಾಳೆ ಬನ್ನಿ ಎಂದು ನೂರಾರು ಸಾರಿ ಬ್ಯಾಂಕಿಗೆ ಅಲೆಯುವಂತೆ ಮಾಡಿದ್ದಾರೆ. ಆದುದರಿಂದ ಈಗ ಬ್ಯಾಂಕ್‌ಗೆ ಬಂದಿರುವ ಅರ್ಜಿಗಳಿಗಾದರೂ ಕೂಡಲೇ ಹಣವನ್ನು ಕೂಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ಸ್ವಾಮಿ ?

ಶ್ರೀ ಡಿ. ದೇವರಾಜ ಅರಸ್.—೨ ಬ್ಯಾಂಕ್‌ಗಳಲ್ಲಿ ಬಂದಿದ್ದ ಅರ್ಜಿಗಳಿಗೆ ಹಣವನ್ನು ಪೂರ್ತಿಯಾಗಿ ಕೊಟ್ಟಿದ್ದಾರೆ.

ಶ್ರೀ ಟಿ. ಎಂ. ಮಂಜುನಾಥ್.—ಇನ್ನೂ ಬೇಕಾದಷ್ಟು ಅರ್ಜಿಗಳು ಹಾಗೇ ಇವೆ.

ಶ್ರೀ ಡಿ. ದೇವರಾಜ ಅರಸ್.—ತಾವು ಹೇಳಿದಂತೆ ಇನ್ನೂ ಒಂದೆರಡು ಕಡೆಗಳಲ್ಲಿ ಈ ರೀತಿ ದೂರುಗಳಿವೆ. ಅರ್ಜಿದಾರರನ್ನು ಸುಮ್ಮನೆ ತಿರುಗಿಸಿ, ಸತಾಯಿಸುತ್ತಾರೆಂದು ತಿಳಿದು ಬಂದಿದೆ. ಅದಕ್ಕೋಸ್ಕರವಾಗಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಆಯಾ ಬ್ಯಾಂಕ್ ಮ್ಯಾನೇಜರ್‌ಗಳನ್ನು ಕರೆಸಿ ಇದರ ಬಗ್ಗೆ ಮಾತನಾಡಬೇಕೆಂದು ತಿಳಿಸಿದ್ದೇವೆ. ಆ ಬ್ಯಾಂಕ್‌ನವರೂ ಕೂಡ ತಮ್ಮಲ್ಲಿ ಹಣವಿಲ್ಲದ್ದರಿಂದ ಸ್ವಲ್ಪ ನಿಧಾನ ಮಾಡುತ್ತಿದ್ದಾರೆಂದು ನನ್ನ ಗಮನಕ್ಕೆ ಬಂದಿದೆ. ಆದರಲ್ಲೂ ಮತ್ತೆ ಮತ್ತೆ ಚೀಫ್ ಸೆಕ್ರೆಟರಿಯವರು ನಾಲ್ಕಾರು ಬಾರಿ ಮೇಲ್ಪಟ್ಟು ಮ್ಯಾನೇಜರನ್ನು ಕರೆಸಿ ಸರಿಯಾದ ರೀತಿಯಲ್ಲಿ ವಿಲೇ ಮಾಡಬೇಕೆಂದು ಹೇಳಿರುವುದಲ್ಲದೆ ಹೆಚ್ಚಿಗೆ ಹಣ ಸಿಗುವಂತೆ ಮಾಡಿರುತ್ತಾರೆ. ಕೆಲವು ಕಡೆ ಇದು ಚೆನ್ನಾಗಿ ನಡೆದಿದೆ, ಕೆಲವು ಕಡೆ ಸರಿಯಾಗಿ ನಡೆಯದೆ ಇರಬಹುದು. ಅದಕ್ಕೆ ಅಧಿಕಾರಿಗಳ ಒಂದು ಧೋರಣೆ ಎಂದು ಹೇಳಬಹುದೆಂದು. ಇತ್ತೀಚೆಗೆ ಕೇಂದ್ರ ಸರ್ಕಾರದವರು ಬ್ಯಾಂಕ್‌ಗಳನ್ನು ನ್ಯಾಷನಲೈಸ್ ಮಾಡಿರುವುದರಿಂದ ಯಾವುದೋ ಒಂದು ಸಮಿತಿ ಮಾಡಿರುವುದಾಗಿ ಜ್ಞಾಪಕವಿರುತ್ತದೆ ನಮ್ಮಿಂದಲೂ ಅಂದರೆ ನಮ್ಮ ರಾಜ್ಯ ಸರ್ಕಾರದಿಂದಲೂ ಒಬ್ಬ ಪ್ರತಿನಿಧಿಯನ್ನು ಆರಿಸಿದ್ದಾರೆಂದು ಹೇಳಿದ ಹಾಗೆ ಜ್ಞಾಪಕ ಇದೆ. ಈ ರೀತಿ ನಾವು ಆಗಿಂದಾಗ್ಗೆ ರಿಸರ್ವ್ ಬ್ಯಾಂಕಿನೊಡನೆ ಮಾತನಾಡಿದ್ದೇವೆ. ಅವರು ಒಂದೂ ಸಾರಿ ಹೇಳುತ್ತಾರೆ ನೇರವಾಗಿ ನಮ್ಮ ಹತೋಟಿಯಲ್ಲಿಲ್ಲವೆಂದು ಹೇಳುವುದರಿಂದ ನಾವು ಸ್ವಲ್ಪ ನೇರವಾಗಿ ಪರಿಹಾರ ಮಾಡಲೂ ಕಷ್ಟವಾಗುತ್ತದೆ.